ಅಂಕಣ – ಒಂದು

# ತಲ್ಲಣಿಸದಿರು ಕಂಡು ತಾಳು.......!

ಸಾಧನೆ.

• ಡಾ. ಆರ್. ವ್ಹಿ. ಪಾಟೀಲ

ುವು. ಸಾಧನೆ ಎನ್ನುವುದರ ಕುರಿತು ಇತ್ತೀಚಿಗೆ
ತುಂಬಾ ಕಾಡುತ್ತಿರುವ ವಿಷಯವಾಗಿದೆ. ಸಾಧನೆ
ವರಿಗೆ ಮತ್ತು ಸಾಧಕರಿಗೆ ಯೋಗ್ಯಸ್ಥಾನ ಸಿಗಬೇಕು.
ತುಂಬಾ ಸಾಧನೆ ಮಾಡಿದರು, ಅವರು ದೊಡ್ಡ
ಹೀಗೆಲ್ಲ ಮಾತಾಡುವುದನ್ನ ನೀವು ಕೇಳಿದ್ದೀರಿ.
ೇಳಿದ್ದೀನಿ. ಮೊನ್ನೆ ಇಂತಹದ್ದೇ ಒಂದು ಸಂದರ್ಭ
ದಗಿಬಂದಿತು. ನಾನು ಓದಿದ ಕಾಲೇಜಿನಿಂದ
ಕರೆ ಬಂತು. ನಿಮಗೆ ಸನ್ಮಾನಿಸುತ್ತಿದ್ದೇವೆ ಬರಬೇಕು
ಈಗಿನ ಪ್ರಾಚಾರ್ಯರು ಹಿಂದೆ ನನಗೆ ಭಾಷೆ
ಶಿಕ್ಷಕರು, ಅವರು ಹೇಳಿದಾಗ ಏಕೆ ಸರ್ ಎಂದೆ.
ಪ್ರತಿ ವರ್ಷ ಹಿರಿತನದ ಆಧಾರದ ಮೇಲೆ ಸಾಧನೆ
ಹಳೆ ವಿದ್ಯಾರ್ಥಿಗಳಿಗೆ ಸನ್ಮಾನಿಸುತ್ತಿದ್ದೇವೆ. ಈಗ
ದಿ ಬಂದಿದೆ. ಬರಬೇಕು ಎಂದರು. ಆಗ ನನಗಾದ
ಅಷ್ಟಿಷ್ಟಲ್ಲ. ಆಯಿತೆಂದು ಒಪ್ಪಿ ಗುರುಗಳ ಕರೆಗೆ
ದೆ. ಅಲ್ಲಿಗೆ ಹೋದೆ. ಅದ್ದೂರಿಯಾಗಿ ಸನ್ಮಾನ
ು. ನನ್ನ ಹಾಗೆ ಇನ್ನೊರ್ವರಿಗೂ ಸನ್ಮಾನವಾಯಿತು.
ೂ ಮೇಷ್ಟ್ರ ಕೆಲಸ ಗಿಟ್ಟಿಸಿಕೊಂಡ ಸಾಧಕರು ಎಂದು
ನಮ್ಮನ್ನು ಸನ್ಮಾನಿಸಿದರು. ಅವರ ದೃಷ್ಟಿಯಲ್ಲಿ ಇದೇ
ಅಂದರೆ ಅಲ್ಲಿ ಕಲಿಯುವ ಮಕ್ಕಳಿಗೆ ಪ್ರೇರಣೆ ಆಗಲಿ
ು ಅವರ ಆಸೆಯಾಗಿತ್ತು ಅಷ್ಟೇ. ಸನ್ಮಾನಿತರಿಂದ
ಮಾತು ಹೇಳಲು ಹೇಳಿದಾಗ ಮೊದಲು ನನ್ನ
ನ್ಮಾನಿತರಾದವರು ಮಾತನಾಡಿದರು. ನಂತರ ನಾನು
ಡಲು ಪ್ರಾರಂಭಿಸಿದೆ. ಆಗ ನನ್ನೊಳಗೆ ಹುಟ್ಟಿದ
ಾಧನೆ ಎಂದರೇನು? ಸಾಧಕ ಎಂದರೆ ಯಾರು?
ಶ್ನೆಗಳನ್ನು ನನ್ನ ಎಲ್ಲ ಗುರುಗಳಲ್ಲಿ ಅಲ್ಲಿಯೇ
ಬಿಟ್ಟೆ ಸರ್ ನಾನೇನು ಸಾಧನೆ ಮಾಡಿದ್ದೇನೆ. ಏನೂ
ೇಷ್ಟ್ರು ಕೆಲಸ ಹಿಡಿದುಬಿಟ್ಟರೆ ಅದು ಸಾಧನೆನಾ ?

ನೌಕರಿ ಹಿಡಿಯುವ ನಗ್ನ ಸತ್ಯ ಎಲ್ಲರಿಗೂ ಗೊತ್ತು. ಯಾರದೋ ಕಾಲು ಬಿದ್ದು ಅವರ ಮನಸ್ಸನ್ನು ಒಪ್ಪಿಸಿ, ಅವರ ದೃಷ್ಟಿಯಂತೆ ನಡೆದು, ಇತ್ಯಾದಿ ಇತ್ಯಾದಿ ಎಲ್ಲವೂಗಳನ್ನು ನಿಭಾಯಿಸಿ, ಪಾಠ ಮಾಡುವ ಕೆಲಸ ಪಡೆದದ್ದಾಯಿತು. ಅದು ಸರಕಾರಿ ಸಂಬಳದ ಕೆಲಸ. ಇಷ್ಟಾದರೆ ಸಾಧನೆಯೇ? ಸಾಧ್ಯವಿಲ್ಲ. ಅದು ಹೇಗೆ ಸಾಧನೆಯಾಗುತ್ತದೆ? ನನ್ನ ಹೊಟ್ಟೆ ಪಾಡಿಗೆ ಮಾಡುವ ಕೆಲಸವದು. ಇದನ್ನು ಸಾಧನೆಯೆಂದು ನಾನು ತಿಳಿಯುವುದಿಲ್ಲ. ಈ ನೌಕರಿ (ಜಾಬ್) ಗಳು ನಮ್ಮನ್ನು ಇಂದು ಸಮಾಜದಲ್ಲಿ ಹೀರೋಗಳಂತೆ ಸೃಷ್ಟಿಮಾಡುತ್ತಿವೆ. ಸಣ್ಣದಿರಲಿ, ದೊಡ್ಡದಿರಲಿ, ಸರ್ಕಾರಿ ನೌಕರಿ ಹಿಡಿದು ಅದರಲ್ಲೂ ಸ್ವಲ್ಪ ಇತಿಹಾಸ, ವಿಜ್ಞಾನ, ರಾಜಕೀಯ, ದೇಶಭಕ್ತಿ, ನಿಷ್ಠೆ, ಪ್ರಾಮಾಣಿಕತೆ, ದಂತ ಕಥೆಗಳು ಏನೆಲ್ಲಾ ಮಾತನಾಡಿಬಿಟ್ಟರೆ ಮುಗಿಯಿತು. ಆತ ನಮ್ಮ ಯುವಕರಿಗೆ ಸಮಾಜದಲ್ಲಿ ಹೀರೋ ಆಗಿಬಿಡುತ್ತಾನೆ. ಇದನ್ನು ಸಾಧನೆ ಅನ್ನಬೇಕಾ? ಸಾಧ್ಯವಿಲ್ಲ. ಯಾವುದೇ ವೃತ್ತಿ ಇರಲಿ, ಅದು ಸೇವೆ ಮಾಡಲು ಸಿಕ್ಕ ಅಥವಾ ದುಡಿಯಲು ಸಿಕ್ಕ, ದೇವರು ದಯಪಾಲಿಸಿದ ಅವಕಾಶ. ನಾವು ಸೇವಕರು, ಒಂದು ರೀತಿಯಲ್ಲಿ ನಿಷ್ಠಾವಂತ ಕೆಲಸಗಾರರು ಅಥವಾ ಆಳುಗಳು. ನಮ್ಮ ಕೆಲಸವೇನೆಂದರೆ, ಒಬ್ಬ ಬೈಕ್ ತಯಾರಿಸಲು ಮೆಕ್ಯಾನಿಕ್ ಹೇಗೆ ಕಾರ್ಯನಿರ್ವಹಿಸುತ್ತಾನೋ, ಹಾಗೆಯೇ ನಾವು ಕೂಡ.

ಆತ ಕಷ್ಟ ಪಟ್ಟು ಕೈಯಲ್ಲಿ ಪಾನಾ–ಪಕ್ಕಡುಗಳನ್ನು ಹಿಡಿದು ಬೈಕ್ ತಯಾರಿಸುತ್ತಾನೆ. ಅದನ್ನು ಮಾರ್ಕೆಟ್‌ಗೆ ಬಿಡುಗಡೆಗೊಳಿಸುತ್ತಾನೆ. ಮಾರ್ಕೆಟಿಂಗ್ ಜಾಹಿರಾತಿಗಾಗಿ ಯಾವುದೋ ಸಿನಿಮಾದಲ್ಲಿ ಆ ಬೈಕ್‌ನ ಬಳಕೆಯಾಗುತ್ತದೆ. ಅದರ ಮೇಲೆ ಹೀರೋ ಕುಳಿತು ಓಡಿಸುತ್ತಾನೆ, ಆ ಸಿನಿಮಾ ೨೦೦ ಕೋಟಿ ಲಾಭ ಗಳಿಸುತ್ತದೆ. ಹಿರೋ... ಮುಂದೆ ಸಿನಿಮಾದಲ್ಲಿ ಬಳಕೆಯಾದ ಆ ಬೈಕ್‌ಗೆ ...

ಇಲ್ಲಿ ಬೈಕ್ ತಯಾರಿಸಿದ ಒಬ್ಬ ಮೆಕ್ಯಾನಿಕ್ ಲಾಭ ಪಡೆದನಾ? ಇಲ್ಲ. ಅದು ಕಂಪನಿಗೆ ಲಾಭವಷ್ಟೆ. ಅಷ್ಟೇ ಅಲ್ಲ, ಹೀರೋ ಯಾರು? ಕಂಪನಿಯವರೇ? ಮೆಕ್ಯಾನಿಕ್‌ನೆ? ಇವರ್‍ಯಾರು ಅಲ್ಲ. ಬೈಕ್ ಮೇಲೆ ಕುಳಿತವನು ಹೀರೋ; ತಯಾರಿಸಿದವನಲ್ಲ. ಅಂದರೆ ನಾವೆಲ್ಲ ನೌಕರಿ ಮಾಡುವವರು ಬೈಕ್ ತಯಾರಿಸುವ ಕೆಲಸಗಾರರ ಅಲ್ವಾ?. ಹಾಗಾದರೆ ನಾವು ಹೇಗೆ ಹಿರೋಗಳಾತ್ತೇವೆ. ಸಾಧ್ಯವಿಲ್ಲ ಅಲ್ವಾ?. ಅದಕ್ಕೆ ಯಾವುದೇ ಹುದ್ದೆಗಳು ಕೆಲಸ ಮಾಡಲು ಇರುತ್ತವೆ ಹೊರತು, ಹೀರೋಯಿಸ್ಂ ಎಕ್ಸ್‌ಪೋಸಿಂಗ್‌ಗಾಗಿ ಅಲ್ಲಾ. ಈಗ ನೋಡಿ ನಾನೊಬ್ಬ ಕನ್ನಡದ ಮೇಸ್ತ್ರಿ, ಶಿಕ್ಷಣವೆಂಬ ಬೈಕ್ ತಯಾರಿಸಿ, ವಿದ್ಯಾರ್ಥಿಗಳೆಂಬ ಹೀರೋಗಳನ್ನ, ಶಿಕ್ಷಣವೆಂಬ ಬೈಕ್ ಮೇಲೆ ಕೂರಿಸುವುದು, ಆ ಮೂಲಕ ಶಿಕ್ಷಣ ಮತ್ತು ಅದರ ಮೇಲೆ ಕುಳಿತ ಹೀರೋಗಳಿಗೆ ಬೇಡಿಕೆ ಬರುವಂತೆ ಮಾಡುವುದು ನನ್ನ ಕೆಲಸ. ಮತ್ತು ಆ ನಿಟ್ಟಿನಲ್ಲಿ ಸಮಾಜವನ್ನು ಕಟ್ಟುವುದು ನನ್ನ ಕನಸು ಎಂದು ಹೇಳಿದೆ. ಹಾಗಾದರೆ ಈಗ ನಾನು ಸಾಧಕನಲ್ಲ. ನಾನೊಬ್ಬ ಕೆಲಸಗಾರ. ನಾನೂ ಸಾಧಕ ಆಗಬೇಕೆಂಬ ಆಸೆ ಇದೆ. ಒಬ್ಬ ಉಪನ್ಯಾಸಕ ಸಾಧಕನಾಗಬೇಕೆಂಬ ಕನಸು ಸಹಜ. ಅಂತಹ ನನ್ನ ಕನಸು ಏನೆಂದರೆ, ಒಂದು ಸಾವಿರ ಪುಸ್ತಕಗಳ ಲೇಖಕ ನಾನಾಗಬೇಕು. ಅಂದರೆ ಸಾಧನೆಯ ಒಂದು ಮೆಟ್ಟಿಲು ಮುಟ್ಟಿದಂತಾಗುತ್ತದೆ, ಹತ್ತಿದಂತಲ್ಲ. ಇಲ್ಲವೇ ಸಾಧನೆಯ ಮೆಟ್ಟಿಲ ಹತ್ತಿರ ನಿಂತಂತೆ ಭಾಸವಾಗಬಹುದು ಅಷ್ಟೆ. ನನ್ನ ದೃಷ್ಟಿಯಲ್ಲಿ ಸಾಧಕರೆಂದರೆ ! ವಿಜಯಪುರದ ಜ್ಞಾನ ಯೋಗಾಶ್ರಮದ ಪರಮಪೂಜ್ಯ ಸಿದ್ಧೇಶ್ವರ ಸ್ವಾಮಿಜಿಗಳು, ಅವರು ಸಾಧಕರು. ನಮ್ಮಂತ ಹುಲು ಮಾನವರಲ್ಲ; ನೋಡಿ ಅಂತಹ "ನಡೆದಾಡುವ ದೇವರು" ಭಾರತ ದೇಶ ಕೊಡಮಾಡುವ ಅತ್ಯುನ್ನತ ಗೌರವಯುತ 'ಪದ್ಮಶ್ರೀ ಪುರಸ್ಕಾರ'ವನ್ನು ನಯವಾಗಿ, ವಿನೂತಭಾವದಿಂದ ಒಪ್ಪದೆ, ಹತ್ತಿರವೂ ಸುಳಿಯಗೊಡದೆ ನಾನೊಬ್ಬ ಸರಳ ಮನುಷ್ಯ ಎಂದು ಇಂಥವರೇ ಹೇಳುವಾಗ ಇನ್ನು ಸಾಧನೆಯ ಬಗ್ಗೆ ಮಾತನಾಡುವ ಹಕ್ಕಾಗಲಿ, ಅಥವಾ ಆ ನಿಟ್ಟಿನ ಧೈರ್ಯವಾಗಲಿ, ನಮ್ಮಂಥವರು ಮಾಡುವುದು ಸರಿಯೇ? ಹಾಗಾದರೆ ಸಾಧಕನೆಂದರೆ ಸಾಧಕನಿಗೆ ಅಂತರಂಗ ಶುದ್ಧಿ ...ಕು, ನಿಷ್ಠೆ, ಕಠಿಣ ಪರಿಶ್ರಮ, ಸತತ ಪ್ರಯತ್ನ, ಪ್ರಾಮಾಣಿಕ ಮನಸ್ಸು, ಧರ್ಮ ನಿಷ್ಠೆ, ಅಧ್ಯಾತ್ಮ ಚಿಂತನೆ, ಓದು, ಒಳ್ಳೆಯವರ ಸಂಪರ್ಕ, ಬೇರೆಯವರ ಒಳ್ಳೆಯತನವನ್ನು ಒಪ್ಪಿಕೊಳ್ಳುವುದು, ...ದಾರ್ಶನಿಕತ್ವದ ಮನೋಭಾವ, ಸಮ್ಯಕ್ ಜ್ಞಾನ, ...ದರ್ಶನ, ಸಮ್ಯಕ್ ಚಾರಿತ್ರ್ಯ ರಕ್ತಗತವಾಗಿ ವ್ಯಕ್ತಿತ್ವವನ್ನು ಪ್ರಭಾವಿಸಿಕೊಂಡಿರಬೇಕು. ಅದರ ಜೊತೆಗೆ ಮಾಡುವ

ತೀರ್ಥವಾಗಿ, ನೀಡುವುದು ದಾನವಾಗಿ, ನಿತ್ಯ ನಡೆದಾಗ ದೇಶಕ್ಕೆ, ಸಮಾಜಕ್ಕೆ ಶಾಶ್ವತವಾದ ಕೊಡುಗೆ ನೀಡುವ ವ್ಯಕ್ತಿತ್ವ ಬೆಳೆದಾಗ, ಸಾಧಕನೆನಿಸಿಕೊಳ್ಳಬಹುದೇನೋ? ಅಂಥವರನ್ನು ನೆನಪಿಸಿಕೊಳ್ಳುವುದಾದರೆ, ರಾಷ್ಟ್ರಪಿತರು, ಶಿಲ್ಪಿಗಳು, ಶರಣರು–ಸಂತರು, ಕವಿಗಳು, ಜ್ಞಾನಿಗಳು, ತಪಸ್ವಿಗಳು, ವಿಜ್ಞಾನಿಗಳು, ದಾರ್ಶನಿಕರ ದಾರಿಯಲ್ಲಿ ನಡೆಯುವ ಕಠಿಣ ತಪಸ್ಸೆ ಸಾಧನೆ ! ಹೋಗಲಿ, ಇಲ್ಲದವರಿಗೆ ತನ್ನ ಬೆವರ ಹನಿಯಿಂದ ಬಂದದ್ದರಲ್ಲಿ ಅನ್ನ ನೀಡುವ ಗುಣವಾದರೂ ಇರಬೇಕು. ಎಲ್ಲರನ್ನು ಸಹಿಸಿಕೊಳ್ಳುವ ಚಿತ್ತವಾದರೂ ಇರಬೇಕು. ನಿಸ್ವಾರ್ಥ, ತ್ಯಾಗ, ಸಮಾದಿಸ್ತ ಮನಸ್ಸು, ಸಮರ್ಪಣಾ ಮನೋಭಾವ, ಪರಿನಿರ್ವಾಣದ ಸ್ಥಿತಿ, ಇವೆಲ್ಲವೂ ಅಂತರಂಗದ ಸ್ತುತಿಗಳಾದಾಗ ಸಾಧಕನಾಗಲು ಸಾಧ್ಯ ಎಂದು ಮಾತನಾಡಿದೆ. ನಾನು ಹೀಗಾಗಲೂ ಸಾಧ್ಯವಿಲ್ಲ, ಆಗುವಂತೆ ಆಶೀರ್ವದಿಸಿ ಗುರುಗಳೆ. ನೀವು ನನ್ನ ವಿದ್ಯಾ ಗುರುಗಳು, ನೀವು ಕಾಲು, ಕೈ, ಮೈ ತೊಳೆದು ಹರಿದು ಹೋದ ಬಚ್ಚಲು ನೀರಿನಲ್ಲಿ ಹುಟ್ಟಿ ಬೆಳೆದ ಬಳ್ಳಿಯೊಳಗಿನ ಹೂವು ನಾನು: ಬಹುಶಃ ಸಾಧನೆ ಕುರಿತು ಮಾತನಾಡುವುದು, ಸಾಧನೆ ಮಾಡಿ ಸಾಧಕನೆನಿಸಿಕೊಳ್ಳುವುದು ಸರಳವಲ್ಲ ಎಂಬ ಪೂರ್ವ ಪ್ರಜ್ಞೆ ನನಗಿದೆ ಎಂದು ಹೇಳಿದೆ. ರ್‍ಯಾಂಡಿ ಫಾಶ್‌ನ ಚೈತನ್ಯ, ಸತ್ಯ ಹೇಳಬೇಕೆಂಬ ಇಂಗಿತವನ್ನು ನೀವೆಲ್ಲ ಕಲಿಯಿರಿ ಎಂದು ಅಲ್ಲಿಯ ವಿದ್ಯಾರ್ಥಿಗಳಿಗೆ ಹೇಳಿ ಮಾತು ಮುಗಿಸಿದೆ.

ಗೆಳೆಯರೆ.....ಇದನ್ನು ಓದಿದಾಗ ಬರುವ ನಿಮ್ಮಲ್ಲಿಯ ವಿಚಾರಗಳು, ನನ್ನಲ್ಲೂ ಬರುತ್ತವೆ. ಹಾಗೆಯೇ ಇಲ್ಲಿಯ ವಿಚಾರಗಳು ನಿಮ್ಮವೂ ಆಗಿರಬಹುದು. ನಿಮ್ಮವೇ ಆಗಿದ್ದರೆ, ಇನ್ನೂ ಸಂತೋಷ. ನಮ್ಮ–ನಿಮ್ಮ ವಿಚಾರ ಚಿಂತನೆ, ಒಂದೇ ಆದಂತಾಯಿತು. ಆದರೆ ಸ್ವಲ್ಪ ಹೊತ್ತು ಮುಂಜಾನೆ ಏಕಾಂಗಿಯಾಗಿ ಕುಳಿತಾಗ ಕೆಲವು ವಿಚಾರಗಳು ಹೊಳೆದವು. ಅವುಗಳ ಅಭಿವ್ಯಕ್ತಿಯೇ ಇವು. ನಾನು ಕಾಲೇಜು ಕಲಿತು ಮರಳಿ ಕಲಿತ ಕಾಲೇಜಿಗೆ ಹೋಗಲು ೧೯ ವರ್ಷ ನನಗೆ ಬೇಕಾಯಿತು. ಅದೊಂದು ಗುಡ್ ನ್ಯೂಸ್ ಅಲ್ಲವೇ? ಆ ಗುಡ್ ನ್ಯೂಸ್‌ನಿಂದಾದವನು ನಾನು. ಆ ಗುಡ್ ನ್ಯೂಸ್‌ನಿಂದಾದ ನನ್ನ ವಿಚಾರಗಳು ಬಂದಾಗ ನನ್ನ ಪೆನ್ನು ಅರಿವಿಲ್ಲದೆ ಹಾಳೆಯ ಮೇಲೆ ನಲಿದಾಡಿ ಲಿಖಿತಗೊಳಿಸಿಬಿಟ್ಟಿತು. ಇವೆಲ್ಲವೂ ನನ್ನ ಮನದ ಮಾತು. ಅಥವಾ ನಿಮ್ಮ ಮನದ ಮಾತು ಆಗಿರಬಹುದು. ಸಾಧನೆ–ಸಾಧಕ, ಸಾರ್ಥಕತೆಯ ಸರಳ ಚರ್ಚೆಯ ಮಾತಾಡಿ, ಟೀ ಕಪ್ ಕೆಳಗೆ ಇಡುತ್ತಾ ನನ್ನ ಭಾಷಣದ ತುಣುಕುಗಳ ಮೆಲುಕನ್ನು ಗೆಳೆಯನಿಗೆ ಹೇಳಿ, ಎದ್ದು ಬಂದೆ.....!!!

Vidyagiri DHARWAD-04
PRINCIPAL
Sanashankari Arts Commerce & Shri Kumar Gubbi Science College
DHARWAD 580 004